**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 46/2020**

| | | |
|---|---|---|
| ಸಾಕ್ಷಿಯ ಹೆಸರುಃ | ಬಸಮ್ಮ | ಫ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಮಹಾದೇವಪ್ಪ | ಚಾಸಾಃ 1 |
| ವಯಸ್ಸು ಃ | 45 ವರ್ಷ | ದಿಃ 30-06-2023 |
| ಉದ್ಯೋಗಃ | ಹೊಲಮನೆ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಕಣೆಕಲ್ , ಬೆಳಗುಂದಿ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ನನಗೆ ಚಾಸಾಃ 4 ಮತ್ತು 5 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. 3 ವರ್ಷಗಳ ಹಿಂದೆ ನಾನು ಮತ್ತು ಚಾಸಾ 4 ರವರು ಹೊಲದಲ್ಲಿ ಟಿಲ್ಲರ ಹೊಡೆಯಲು ಹೊದಾಗ ಆರೋಪಿತರು ನನಗೆ ಹೊಡೆಯಲು ಬಂದಿರುತ್ತಾರೆ. ನನ್ನ ಹೊಲ ಇದೆ ನಾನು ಟಿಲ್ಲರ ಹೊಡೆಯುತ್ತೇನೆ ಎಂದು ಹೇಳಿದಾಗ ಆರೋಪಿತರು ಏ ಸೂಳೆ ಮಗಳೆ ಎಂದು  ನಿನ್ನ ಅಪ್ಪನ ಹೊಲ ಎಂದು ಅವಾಚ್ಯ ಶಬ್ದದಿಂದ ಬೈದು 1 ನೇ ಆರೋಪಿತರು ನನಗೆ ಕಪಾಳಕ್ಕೆ ಹೊಡೆದಿರುತ್ತಾನೆ.  ಸೀರೆ ಸೆರಗು ಹಿಡಿದು ಎಳೆದು ಕೆಳಗಡೆ ಹಾಕಿ ಕೂದಲಿನಿಂದ ಎಳೆದು ಕಾಲಿನಿಂದ ಒದ್ದಿರುತ್ತಾನೆ. ನಾನು ಚಿರಾಡಿದ ನಂತರ ಚಾಸಾ 4 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ಚಾಸಾ 4 ರವರು ನನ್ನ ತಾಯಿಗೆ ಯಾಕೆ ಹೋಡೆಯುತ್ತಿರಾ ಎಂದು ಕೇಳಿದಾಗ 2 ಮತ್ತು 4 ನೇ ಆರೋಪಿತರು ಈ ಸೂಳೆ ಮಗಳಿಂದ ಬಹಳ ಆಗಿದೆ ಎಂದು ಅವಾಚ್ಯ ಶಬ್ದದಿಂದ ಬೈದಿರುತ್ತಾರೆ. 3 ನೇ ಆರೋಪಿತನು ಅಡ್ಡಗಟ್ಟಿ ನಿಲ್ಲಿಸಿ ಹೊಲದ ತಂಟೆಗೆ ಬಂದರೆ ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಟಿಲ್ಲರ ಹೊಡೆಯುವ ಚಾಸಾ 5 ರವರು ಜಗಳವನ್ನು ಬಿಡಿಸಿರುತ್ತಾರೆ. ನಂತರ ನಾವು ಆರೋಪಿತರ ವಿರುದ್ದ ಸಂಜೆ 4-5 ಗಂಟೆ ಸುಮಾರಿಗೆ ದೂರನ್ನು ಸಲ್ಲಿಸಿರುತ್ತೇನೆ.  ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಸಾಕ್ಷಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ  ಹೆಬ್ಬಟಿನ ಗುರುತನ್ನು ಗುರುತಿರುತ್ತಾರೆ.  ಪೋಲಿಸರು ಬಂದು 6.00 ಗಂಟೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ.

**<u>ಪಾಟಿ ಸವಾಲುಃ  ಆರೋಪಿತರ ಪರ ವಕೀಲರು ಶ್ರೀ ಕೆ.ಬಿ.ಎ.  ಇವರಿಂದ ಇಲ್ಲ</u>**

**1.** ಜಮೀನು ಸರ್ವೆ ನಂ. 264 ನ್ನು ನಾವೇ ವಿಶ್ವಾಸದಿಂದ ಆರೋಪಿತರಿಗೆ ಮಾಡಿಕೊಟ್ಟಿರುತ್ತೇವೆ. ಸದರಿ ಜಮೀನು ಸರ್ವೆ ನಂ. 264 1 ನೇ ಆರೋಪಿತನ ಹೆಸರಿನಲ್ಲಿ  ಪಹಣಿ ಪತ್ರಿಕೆ ಇದೆ ಎಂದರೆ ಸರಿ.  ನಾನು ಎಸಿ ಕಚೇರಿಯಲ್ಲಿ ಆರೋಪಿತರ ವಿರುದ್ದ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ಜಮೀನು ಸಲುವಾಗಿ ಅಸಲು ದಾವೆ ವಿಲೇವಾರಿಗೆ ಬಾಕಿ ಇದೆ ಎಂದರೆ ಸರಿ. ನನ್ನ ತವರು ಮನೆ ಬೆಳಗುಂದಿ ಎಂದರೆ ಸರಿ. ನಾನು ಬೆಳಗುಂದಿಯಲ್ಲಿ ಇರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಜೀವದ ಭಯ ಇರುವದರಿಂದ ನಾನು ಬೆಳಗುಂದಿಯಲ್ಲಿ ಇರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಪ್ರಕರಣ ದಾಖಲು ಮಾಡುವ ಕ್ಕಿಂತ ಮುಂಚೆ ಕಣೆಕಲದಲ್ಲಿ ವಾಸವಾಗಿದ್ದೆ. ಸದರಿ ನಿಪಿ-1 ರಲ್ಲಿ ಕಣೆಕಲ್ ದಲ್ಲಿ ವಾಸವಾಗಿರುತ್ತೇನೆ ಎಂದು ಬರೆದಿರುವುದಿಲ್ಲ ಎಂದರೆ ಸರಿ.

2. ಜಮೀನಿನಲ್ಲಿ ಚಾಸಾ 5 ರವರ ಟಿಲ್ಲರ ತೆಗೆದುಕೊಂಡು ಹೋಗಿರುತ್ತೇವೆ. ಚಾಸಾ 5 ರವರು ಟಿಲ್ಲರ ಹೊಡೆಯಲು ಡ್ರೈವರ ಆಗಿ ಬಂದಿರುತ್ತಾರೆ. ಚಾಸಾ 5 ರವರು ನಮಗೆ ಬೇಕಾದವರು. ಸದರಿ ಆರೋಪಿತನು ಎರಡು ಭಾಗದಲ್ಲಿ ಕಪಾಳಕ್ಕೆ ಹೊಡೆದಿರುತ್ತಾನೆ. ನಾನು ನಿಪಿ-1 ರಲ್ಲಿ ಸದರಿ ವಿಷಯವನ್ನು ಬರೆಸಿರುತ್ತೇನೆ. 1 ನೇ ಆರೋಪಿತನು ಸೀರೆ ಹಿಡಿದು ಎಳೆದಿರುತ್ತಾನೆ ಮತ್ತು ಹೊಡೆದಿರುತ್ತಾನೆ. ನನಗೆ ಗಾಯ ಆಗದೆ ಇರುವದರಿಂದ ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ನಾನು ನಿಪಿ-1 ನ್ನು ನೀಡಲು ಸಂಜೆ 4-5 ಗಂಟೆಗೆ ಹೋಗಿರುತ್ತೇನೆ. ನಾನು ಮಃ 3.00 ಗಂಟೆಗೆ ಟಿಲ್ಲರ ತೆಗೆದುಕೊಂಡು ಹೊಲಕ್ಕೆ ಹೋಗಿರುತ್ತೇನೆ. ನಾನು ಹೋದಾಗ ಹೊಲದಲ್ಲಿ ನಾನು ಮತ್ತು ಚಾಸಾ 4 ಮತ್ತು ಕುಮಾರ, ಹಣಮಂತ ಮತ್ತು ಬಸವರಾಜ ಇದ್ದರು. ಇವರನ್ನು ಹೊರತು ಪಡಿಸಿ ಜಮೀನಿನಲ್ಲಿ ಯಾರು ಇರಲಿಲ್ಲ. ನಾನು ಪೋಲಿಸ ಠಾಣೆಗೆ 5.30 ರಿಂದ 6.00 ಗಂಟೆಗೆ ಹೋಗಿರುತ್ತೇನೆ.

3. ನನಗೆ ಆರೋಪಿತರು ಹೊಡೆಯದೆ ಇದ್ದರೂ ಕೂಡಾ ಅವರ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ  ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 46/2020**

| | | |
|---|---|---|
| ಸಾಕ್ಷಿಯ ಹೆಸರುಃ | ನೀಲಮ್ಮ | ಫ್ರಾಸಾಃ 2 |
| ತಂದೆ/ಗಂಡನ ಹೆಸರುಃ | ಪ್ರಕಾಶ | ಚಾಸಾಃ 4 |
| ವಯಸ್ಸು ಃ | 25 ವರ್ಷ | ದಿಃ 30-06-2023 |
| ಉದ್ಯೋಗಃ | ಮನೆ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಕಣೆಕಲ್ , ಹಾ.ವ. ಕೂಡ್ಲೂರು | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ನನಗೆ ಚಾಸಾಃ 1, 5, 6 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ದಿಃ 20.10.2019 ರಂದು ನಾನು ಮತ್ತು ಚಾಸಾ 1 ರವರು ನಮ್ಮ ಹೊಲವನ್ನು ಚಾಸಾ 5 ರವರ ಟ್ರಾಕ್ಟರನ್ನು ತೆಗೆದುಕೊಂಡು ಟಿಲ್ಲರ ಹೊಡೆಯಲು ಹೋಗಿರುತ್ತೇವೆ. ಆರೋಪಿತರು ಟ್ರಾಕ್ಟರಗೆ ಅಡ್ಡ ಬಂದು ಚಾಸಾ 1 ರವರಿಗೆ ಅವಾಚ್ಯ ಶಬ್ದದಿಂದ ಬೈದು ನಿನ್ನ ಹೊಲ ಅಲ್ಲ ನನ್ನದು ಹೊಲ ಇದೆ ಎಂದು ಹೇಳಿದಾಗ 1 ನೇ ಆರೋಪಿತನು ಅವಾಚ್ಯ ಶಬ್ದದಿಂದ ಬೈದು ಕಪಾಳಕ್ಕೆ ಹೊಡೆದಿರುತ್ತಾನೆ. 1 ನೇ ಆರೋಪಿತನು ಚಾಸಾ 1 ರವರ ಸೀರೆ ಸೆರಗನ್ನು ಹಿಡಿದು ಎಳೆದು ಅವಮಾನ ಮಾಡಿ ನೆಲಕ್ಕೆ ಹಾಕಿ ಕಾಲಿನಿಂದ ಒದ್ದಿರುತ್ತಾನೆ. ಚಾಸಾ 1 ರವರು ಚಿರಾಡುವಾಗ ನಾನು ಬಿಡಿಸಲು ಹೋದಾಗ 2 ಮತ್ತು 4 ನೇ ಆರೋಪಿತರು ನನಗೆ ಅವಾಚ್ಯ ಶಬ್ದದಿಂದ ಬೈದು ನಾವು ತಪ್ಪಿಸಿಕೊಂಡು ಹೋಗುವಾಗ 3 ನೇ ಆರೋಪಿತರು ಅಡ್ಡಗಟ್ಟಿ ನಿಲ್ಲಿಸಿ ಅವಾಚ್ಯ ಶಬ್ದದಿಂದ ಬೈದು ಈ ಹೊಲದ ತಂಟೆಗೆ ಬಂದರೆ ನಿಮಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಚಾಸಾ 5 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಕೆ.ಬಿ.ಎ. ಇವರಿಂದ ಇಲ್ಲ**

ನನ್ನ ಗಂಡನ ಊರು ಕೂಡ್ಲೂರು. ನಾನು ಕೂಡ್ಲೂರನಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನನಗೆ ಪೋಲಿಸರು ವಿಚಾರಣೆ ಮಾಡಿರುವುದಿಲ್ಲ. ದಿಃ 20.10.2019 ರಂದು ನಾವು ಟಿಲ್ಲರ ಹೊಡೆಯಲು ಹೋದಾಗ ಆರೋಪಿತರು ಬಂದು ಅವಾಚ್ಯ ಶಬ್ದದಿಂದ ಬೈದು ಚಾಸಾ 1 ರವರ ಸೀರೆ

ಸೆರಗನ್ನು ಎಳೆದು ಅವಮಾನ ಮಾಡಿ ಹೊಡೆಬಡೆ ಮಾಡಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಸರ್ವೆ ನಂ. 264 ಸಲುವಾಗಿ ನಮ್ಮ ಮತ್ತು ಆರೋಪಿತರ ನಡುವೆ ಜಗಳವಿದೆ ಎಂದರೆ ಸರಿ. ಈ ಜಮೀನು ಸಲುವಾಗಿ ಎಸಿ ಕಚೇರಿ ಮತ್ತು ನ್ಯಾಯಾಲಯ ಯಾದಗಿರಿಯಲ್ಲಿ ಪ್ರಕರಣವು ವಿಲೇವಾರಿಗೆ ಬಾಕಿ ಇದೆ ಎಂದರೆ ಸರಿ. ನಾನು ಚಾಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**